# ಮೌನ ಪ್ರಭಾವಲಯ



ಮಾತಾ ತ್ಯಾಗಮಯೀ

ಶ್ರೀಮಾತೆಯವರನ್ನು ಕುರಿತು ಕವಿಗಳೊಬ್ಬರು ‘ಮೌನಪ್ರಭಾವಲಯವೆ’ ಎಂದು ಹಾಡಿದ್ದಾರೆ. ಆಧ್ಯಾತ್ಮಿಕ ಸಾಧನೆಗೆ ಈ ಭಾವವು ಎಷ್ಟು ಸಹಕಾರಿಯಾಗುತ್ತದೆ ಎಂಬುದನ್ನು ಇಲ್ಲಿ ವಿವರಿಸಿರುವ ಲೇಖಕಿ, ಚಳ್ಳಕೆರೆ ಶ್ರೀ ಶಾರದಾಶ್ರಮದ ಮುಖ್ಯಸ್ಥರು. ಉತ್ತಮ ಬರಹಗಾರರೂ, ಅನುವಾದಕರೂ, ವಾಗ್ಮಿಯೂ ಆಗಿರುವ ಅವರು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

**ನಾ**ವು ಧ್ಯಾನಿಸುವಾಗ ಹೃದಯಪದ್ಮದಲ್ಲಿರುವ ಚಿದಾಕಾಶವನ್ನು ಪ್ರವೇಶಿಸುತ್ತೇವೆ. ಅಲ್ಲೊಂದು ಜ್ಯೋತಿರ್ಮಯವಾದ, ಸಜೀವವಾದ ರಾಮಕೃಷ್ಣ ತಪೋವನವಿದೆ. ಅಲ್ಲಿ ಸಂಚರಿಸುತ್ತ ನಾವು ನಹಬತ್ ಎಂಬ ಪರ್ಣಕುಟಿಯನ್ನು ದರ್ಶಿಸಿ ಆನಂದ ಪುಳಕಿತರಾಗುತ್ತೇವೆ. ಅಲ್ಲಿ ಶ್ರೀಮಾತೆ ಎಂಬ ದೀಪ ಉರಿಯುತ್ತಿದೆ. ಆ ದೀಪದ ಶಾಂತಿ ಕಾಂತಿ ಪಾವಿತ್ರ್ಯಗಳಿಗೆ ನಮ್ಮ ಮನ ಮೋಹಿತವಾಗುತ್ತದೆ. ಮನಸ್ಸು ಆ ದೀಪಕ್ಕೆ ಬಾಗಿ ಬಾಗಿ ನಮಿಸುತ್ತದೆ. ಆ ಬೆಳಕಿನ ಲೋಕದಲ್ಲೇ ನಾವು ತಲ್ಲೀನರಾಗುತ್ತೇವೆ. ಆ ದೈವೀ ಶಾಂತಿ, ಕಾಂತಿ ನಮ್ಮನ್ನು ಆವರಿಸುತ್ತದೆ. ಆ ಮೌನ ಪ್ರಭಾವಲಯದಲ್ಲಿ ನಾವೂ ಒಂದಾಗುತ್ತೇವೆ.

**ಮೌನ ಪ್ರಭಾವಲಯ** – ಶ್ರೀಮಾತೆಯವರ ಜೀವನವನ್ನು ಪ್ರತಿನಿಧಿಸಲು ನಮಗೆ ಬಹುಶಃ ಇದಕ್ಕಿಂತ ಉತ್ತಮ ಶಬ್ದ ದೊರೆಯಲಿಕ್ಕಿಲ್ಲ. ಶ್ರೀಮಾತೆಯವರ ಜೀವನ ಮೌನ, ಅವರ ಸಂದೇಶ ಮೌನ, ಅವರ ಚಾರಿತ್ರ್ಯ ಮೌನ. ಅವರ ಲೋಕಸಂಗ್ರಹ ಕಾರ್ಯ ನಡೆದದ್ದು ಮೌನವಾಗಿ. ಅವರ ಅತ್ಯುನ್ನತ ಆಧ್ಯಾತ್ಮಿಕ ಭೂಮಿಕೆಯನ್ನು ಸೂಚಿಸುವ ಶಬ್ದವೂ ಅದೇ. ಅವರು ನಮಗೆ ಪ್ರಿಯರಾಗಲೂ ಆ ಮೌನವೇ ಕಾರಣ.

ಒಮ್ಮೆ ಒಬ್ಬ ಬಾವುಲ್ ಜಯರಾಮಬಾಟಿಯಲ್ಲಿ ಶ್ರೀಮಾತೆಯವರ ಅಂಗಳದಲ್ಲಿ ಕುಳಿತು ಆಗಮನಿ ಗೀತೆಗಳನ್ನು ಹಾಡುತ್ತಿದ್ದ. ಶ್ರೀಮಾತೆಯವರು ಬಾಗಿಲ ಬಳಿಯಲ್ಲಿ ಕುಳಿತು ಗಂಭೀರವಾಗಿ ಆಲಿಸುತ್ತಿದ್ದಾರೆ. ಹಾಡು ಕೇಳುತ್ತ ಕೇಳುತ್ತ ಅವರ ಭಾವ ದಟ್ಟವಾಯಿತು, ಗಂಭೀರವಾಯಿತು. ಅವರ ಮನಸ್ಸು ಹಾಡಿನ ಭಾವದಲ್ಲಿ ಕರಗಿಹೋಯಿತು. ಅವರು ಸ್ಥಿರವಾದರು. ಹಾಡು ಮುಗಿದರೂ ಅವರಿಗೆ ಬಾಹ್ಯ ಜಗತ್ತಿನ ಪರಿವೆ ಇಲ್ಲ. ಬಾವುಲ್ ದಕ್ಷಿಣೆ ಕೇಳಿದ. ಅದು ಅವರಿಗೆ ಕೇಳಿಸಲೇ ಇಲ್ಲ. ಶಿಷ್ಯ ಆಶು ನಾಲ್ಕು ಪೈಸೆ ಕೊಟ್ಟು ಅವರನ್ನು ಕಳುಹಿಸಿದ. ಹತ್ತು ನಿಮಿಷ ಉರುಳಿದರೂ ಶ್ರೀಮಾತೆಯವರು ಹಾಗೆಯೇ ಸ್ಥಿರವಾಗಿದ್ದಾರೆ. ಏನು ಮಾತನಾಡಿದರೂ ಪ್ರತಿಕ್ರಿಯೆಯಿಲ್ಲ. ಬಳಿಕ ಅವರು ಅದೇ ಲೋಕದಲ್ಲಿ ಮುಳುಗಿ ''ನಡೆಯಿರಿ, ಈಗ ಎಲ್ಲ ನೀರಸವೆನ್ನಿಸುತ್ತದೆ'' ಎಂದರು. ಆ ಹಾಡು ಅವರಿಗೆ ಮೌನದಾಳದ ತಮ್ಮ ನಿಜಸ್ವರೂಪದಲ್ಲಿ ಸ್ಥಿತರಾಗುವಂತೆ ಮಾಡಿತು.[೧]

ಇಡೀ ವಿಶ್ವದಲ್ಲಿ ಒಂದು ಗಂಭೀರ ಶಾಂತಿ, ಪವಿತ್ರ ಮೌನ ತಾನೇ ತಾನಾಗಿದೆ. ಇದು ನಮಗೆ ಏಕೆ ಗೊತ್ತಾಗುತ್ತಿಲ್ಲ? ನಮ್ಮ ಮೌನ ಅಲ್ಲದ, ಮೌನ ಆಗದ ಸ್ವಭಾವ. ಇದು ಕೇವಲ ಮಾತನ್ನು ನಿಲ್ಲಿಸುವ ಮಾತಲ್ಲ, ಪಂಚೇಂದ್ರಿಯಗಳನ್ನು ನಿಲ್ಲಿಸುವ ಮಾತೂ ಅಲ್ಲ. ಅವುಗಳ ಹಿಂದಿರುವ ಹತ್ತು ಹಲವು ದಿಕ್ಕಿನಲ್ಲಿ ಹರಿಯುವ, ಅತಿ ಚಂಚಲ, ಅವ್ಯವಸ್ಥಿತ, ಮನಸ್ಸು ಬುದ್ಧಿಗಳ ಓಟವನ್ನು ನಿಲ್ಲಿಸಿ, ಅದನ್ನು ಉನ್ನತ ವಸ್ತುವಿನಲ್ಲಿ ಸ್ಥಿರಗೊಳಿಸುವ ಮಾತು. ಹಾಗಾದರೆ ಮೌನ ಕಠಿಣವಿದೆ. ಕಠ ಉಪನಿಷತ್ತು ನೆನಪಿಸುತ್ತದೆ : *(೧.೩.೧೩)*

**ಯಚ್ಛೇದ್ ವಾಙ್ಮನಸೀ ಪ್ರಾಜ್ಞಃ ತದ್ಯಚ್ಛೇತ್ ಜ್ಞಾನ ಆತ್ಮನಿ ।**
**ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ ತದ್ಯಚ್ಛೇತ್ ಶಾಂತ ಆತ್ಮನಿ ॥**

‘ವಿವೇಕಿಯು ವಾಕ್ಕನ್ನು ಮನಸ್ಸಿನಲ್ಲಿ ಲೀನಗೊಳಿಸಬೇಕು. ಮನಸ್ಸನ್ನು ಪ್ರಕಾಶಸ್ವರೂಪವಾದ ಬುದ್ಧಿಯಲ್ಲಿ ಲಯಗೊಳಿಸಬೇಕು. ಬುದ್ಧಿಯನ್ನು ಮಹತ್ ಆತ್ಮನಲ್ಲಿ ಲಯ ಮಾಡಿಕೊಳ್ಳಬೇಕು. ಮಹತ್ ಆತ್ಮನನ್ನು ಶಾಂತ ಆತ್ಮನಲ್ಲಿ ಲಯ ಮಾಡಿಕೊಳ್ಳಬೇಕು.’

ಶ್ರೀಮಾತೆಯವರ ಮೌನ ಈ ಸ್ತರದ್ದು. ಭಗವಂತ ವಾಕ್ಯಮನಾತೀತ. ಅನಂತನಾದ ಭಗವಂತನನ್ನು ಅನುಭವಿಸಿದಾಗ ಮೌನವಲ್ಲದೆ ಮತ್ತೇನು ಉಳಿದೀತು? ಹೃದಯಗ್ರಂಥಿಗಳೆಲ್ಲ ಭೇದಿಸಲ್ಪಟ್ಟು, ಶುದ್ಧಸತ್ತ್ವದಲ್ಲಿ ನೆಲೆಸಿದ ವಾಸನಾಶೂನ್ಯನಾದ ವ್ಯಕ್ತಿಯಲ್ಲಿ ಮೌನವಲ್ಲದೆ ಮತ್ತೇನನ್ನು ಕಾಣಲು ಸಾಧ್ಯ ? ವ್ಯಕ್ತಿ ವಾಕ್ಯಮನಗಳ ಮಿತಿಯನ್ನು ದಾಟಿದಾಗಲೇ ನಿಜವಾದ ಮೌನ. ಶ್ರೀಮಾತೆಯವರು ತಾವು ಸದಾಕಾಲ ಮೌನವಲಯದಲ್ಲಿ ನೆಲೆಸಿ

೧ Sri Sarada Devi and Her Divine Play, p. 541

ದ್ದುದಷ್ಟೇ ಅಲ್ಲ, ಇತರರ ಮೇಲೂ ಆ ವಲಯದ ಪ್ರಭೆಯನ್ನು ಕಾಂತಿಶಾಂತಿಯನ್ನು ಬೀರಿ ಅವರನ್ನೂ ತಂಪುಗೊಳಿಸಿದರು, ಪೂರ್ಣಗೊಳಿಸಿದರು.

ಶ್ರೀಮಾತೆಯವರ ಮೌನಪ್ರಭಾವಲಯವನ್ನು ಸೋದರಿ ನಿವೇದಿತಾ ವರ್ಣಿಸುತ್ತಾಳೆ :

''ಸಾಯಂಕಾಲವಾಯಿತು. ದೀಪ ಹೊತ್ತಿಸಲಾಯಿತು. ಧೂಪದ ಮಧುರ ಸುವಾಸನೆ ಎಲ್ಲೆಡೆ ಪಸರಿಸಿತು. ಉದ್ಬೋಧನದ ಸ್ತ್ರೀಯರೆಲ್ಲ ತಮ್ಮ ತಮ್ಮ ಹರಟೆಗಳನ್ನು ಹಾಗೂ ಕಾರ್ಯಗಳ ಗಲಾಟೆಗಳನ್ನು ನಿಲ್ಲಿಸಿ ಶುಚಿರ್ಭೂತರಾಗಿ ಶ್ರೀರಾಮಕೃಷ್ಣರಿಗೆ (ಭಾವಚಿತ್ರಕ್ಕೆ) ಬಾಗಿ ನಮಿಸಿದರು. ಶ್ರೀಮಾತೆಯವರಿಗೂ ಬಾಗಿ ನಮಿಸಿ, ಸಾಲಾಗಿ ಮೆಟ್ಟಿಲುಗಳನ್ನೇರಿ ತಾರಸಿಗೆ ಹೋದರು. ಅವರೆಲ್ಲ ಗೋಡೆಗೆ ಬೆನ್ನು ಮಾಡಿ, ಮುಖದ ಮೇಲೆ ಸೆರಗೆಳೆದುಕೊಂಡು ಕುಳಿತರು. ಅವರ ಜಪಮಾಲೆಗಳು ತಿರುಗಿದವು. ಶ್ರೀಮಾತೆಯವರೂ ಗಂಭೀರ ಧ್ಯಾನಲೀನರಾದರು, ಜಗತ್ತು ಮರೆತುಹೋಯಿತು, ದೇಹ ಮನಸ್ಸುಗಳು ಮರೆತುಹೋದವು. ಒಂದು -ಒಂದೂವರೆ ಘಂಟೆ ಮಾತಿಲ್ಲ. ಇಡೀ ವಾತಾವರಣ ಪವಿತ್ರವಾದ ಪೂಜಾಭಾವದಿಂದ ಓತಪ್ರೋತವಾಯಿತು, ಆಕಾಶದಲ್ಲಿ ನಕ್ಷತ್ರಗಳು ಒಂದೊಂದಾಗಿ ಕಾಣಿಸಿಕೊಂಡಂತೆ ಶಂಖ ಜಾಗಟೆಗಳ ಘೋಷವಾಯಿತು. ಆರತಿಯನ್ನು ಬೆಳಗಲಾಯಿತು. ಎಲ್ಲರೂ ಮೌನವಾಗಿ ತಮ್ಮ ತಮ್ಮ ಕಾರ್ಯಗಳಿಗೆ ತೆರಳಿದರು.''[೨] ''ಶ್ರೀಮಾತೆಯವರು ಮಾಧುರ್ಯದ ಮೂರ್ತರೂಪವಾಗಿದ್ದರು. ಅದು ಪೂಜೆಯ ವೇಳೆಯಲ್ಲಿ ಮತ್ತೂ ವಿಶೇಷವಾಗಿ ಪ್ರಕಟವಾಗುತ್ತಿತ್ತು... ಅವರ ಮುಖದಷ್ಟು ಪ್ರೇಮಪೂರ್ಣವಾದ ಇನ್ನೊಂದು ಮುಖವನ್ನು ನಾನು ನೋಡಿಲ್ಲ. ಅವರಷ್ಟು ಸ್ಪಷ್ಟತೆಯಿಂದ ಕೂಡಿದ ಸ್ವಚ್ಛ ಮನಸ್ಸನ್ನು ನಾನು ಕಂಡಿಲ್ಲ''[೩] ಎಂದು ಸೋದರಿ ನಿವೇದಿತಾ ಹೇಳುತ್ತಾಳೆ. ಆ ಪ್ರೇಮಪೂರ್ಣ ಮುಖ, ಸ್ವಚ್ಛ ಮನಸ್ಸು ತನ್ನ ಸ್ವರೂಪಬೋಧೆಯ ಫಲವಲ್ಲದೆ ಮತ್ತೇನು? ಮೌನವಲಯದ ಪರಮ ತಪಸ್ಸಿನ ಪ್ರಭೆಯಲ್ಲದೆ ಮತ್ತೇನು?

ಮನುಷ್ಯನಿಗೆ ಮೌನವಾಗಿರುವುದು ಕಠಿಣವಿದೆ! ಅದಕ್ಕೊಂದು ಮನಶ್ಶಕ್ತಿ ಬೇಕು, ತರಬೇತಿ ಬೇಕು, ಅಂತರ್ಮುಖತೆ ಬೇಕು! ಶ್ರೀಮಾತೆಯವರ ದಿನಚರಿಯನ್ನು ವಿವರಿಸಿದ ಪ್ರತಿಯೊಬ್ಬರೂ ಅದು ಎಷ್ಟು ಮೌನವಾಗಿತ್ತು ಎಂಬುದರ ಕಲ್ಪನೆಯನ್ನು ನೀಡಿದ್ದಾರೆ. ಸ್ವಾಮಿ ಶಾರದೇಶಾನಂದರು ವಿವರಿಸುತ್ತಾರೆ, ''ರಾತ್ರಿಯಾಗಲು ಶ್ರೀಮಾತೆಯವರು ತಾವೇ ಹಿಟ್ಟು ನಾದಿ, ಲೂಚಿ ಲಟ್ಟಿಸಿ, ಶ್ರೀರಾಮಕೃಷ್ಣರಿಗೆ ನೈವೇದ್ಯ ಅರ್ಪಿಸುತ್ತಿದ್ದರು. ಅನಂತರ ಅವು ಆರಿ ಹೋಗದ ಹಾಗೆ ಭದ್ರವಾಗಿ ಮುಚ್ಚಿಟ್ಟು, ತಮ್ಮ ಮಕ್ಕಳು ಜಪ ಧ್ಯಾನ ಮುಗಿಸಿ ಬರುವವರೆಗೆ ಕಾಯುತ್ತ ಕುಳಿತುಕೊಳ್ಳುತ್ತಿದ್ದರು. ಶ್ರೀರಾಮಕೃಷ್ಣರ ಭಾವಚಿತ್ರದ ಎದುರಿನಲ್ಲಿ ಒಂದು ಕ್ಷೀಣವಾದ ದೀಪ ಉರಿಯುತ್ತಿತ್ತು. ಆ ದೀಪದ ಬಳಿಯಲ್ಲಿಯೇ ಕಾಲು ಚಾಚಿ ಕುಳಿತ ಶ್ರೀಮಾತೆಯವರು ಯಾವ ಭಾವಗಳ ಲೋಕದಲ್ಲಿ ವಿಹರಿಸುತ್ತಿದ್ದರೋ, ಅರಿಯಬಲ್ಲವರಾರು?[೪] ಅಥವಾ ಶ್ರೀರಾಮಕೃಷ್ಣರ ನುಡಿ, ''ಮುಖ್ಯವಾಗಿ ಬೇಕಾದುದು ಭಕ್ತಿ.'' ಭಕ್ತಿ ಪಕ್ವವಾಯಿತೋ ಭಾವ, ಭಾವ ಪಕ್ವವಾಯಿತೋ ಪ್ರೇಮ. ಪ್ರೇಮದಿಂದ ವಸ್ತುಲಾಭ ಎಂಬಂತೆ ನಿಜ ವಸ್ತುಲಾಭತುಷ್ಟರಾಗಿ ಮೌನವಲಯದಲ್ಲಿ ವಿಹರಿಸುತ್ತಿರಬಹುದೆ?

ಭಗವದ್ಭಾವದಲ್ಲಿರುವಾಗ ಯಾರು ತಾನೆ ಮೌನವಾಗಿರುವುದಿಲ್ಲ, ಆನಂದವಾಗಿರುವುದಿಲ್ಲ? ಶ್ರೀಮಾತೆಯವರ ಮನಸ್ಥಿತಿಯೇನೂ ದೊಡ್ಡದಲ್ಲ ಎಂದು ನಾವು ಮೂಗು ಮುರಿಯುವಂತೆಯೇ ಇಲ್ಲ. ನಾವು ಹಲವು ದಶಕಗಳಿಂದ ಭಗವಚ್ಚಿಂತನೆ, ಜಪ-ಧ್ಯಾನದಲ್ಲಿ ತೊಡಗಿಲ್ಲವೆ? ಆದರೆ ಮಾತು-ವಿಚಾರಗಳ ಅಂತ್ಯವಾದ ಮೌನವನ್ನು, ಮೌನದ ರಸವನ್ನು ರುಚಿಯನ್ನು ಒಂದರೆಕ್ಷಣವಾದರೂ ಅನುಭವಿಸಿದ್ದೇವೇನು? ನಮಗೆ ಆ ಕುರಿತು ಆಕರ್ಷಣೆ ಇದೆಯೆ? ವಾಸನೆಗಳ ರಭಸವಿರುವವರೆಗೆ ಮೌನದ ಮಾತೆಲ್ಲಿ? ಮನ ಬುದ್ಧಿಗಳು ನಿರುದ್ಧಗೊಳ್ಳದೆ, ಇನ್ನೂ ತಮೋಗುಣ ರಜೋಗುಣಗಳು ನಮ್ಮನ್ನು ಆಟವಾಡಿಸುತ್ತಿರುವವರೆಗೆ ನಾವು ಸಾಧಕರಾಗಿದ್ದರೂ ಮೌನದಿಂದ ದೂರವಿದ್ದೇವೆ. ನಮ್ಮ ಮನಸ್ಸು ಚಿದಾಕಾಶದಲ್ಲಿ ಇನ್ನೂ ರಾಮಕೃಷ್ಣ ತಪೋವನವನ್ನೇ ಕಂಡಿಲ್ಲ, ಅಲ್ಲಿನ ಪರ್ಣಕುಟಿಯ ದೀಪದಲ್ಲಿ ಅರೆಕ್ಷಣವೂ ನೆಲೆ ನಿಂತಿಲ್ಲ. ಇನ್ನು ಮೌನ ಹೇಗೆ ಸಾಧ್ಯ?

ಶ್ರೀಮಾತೆಯವರು ಭಗವಚ್ಚಿಂತನೆಯಲ್ಲಿರುವಾಗ ಮಾತ್ರ ಮೌನವಾಗಿರುತ್ತಿದ್ದರು. ಮಾತ್ರವಲ್ಲ ವ್ಯವಹಾರ ಜಗತ್ತಿನ ಎಲ್ಲ ಗೌಜು ಗದ್ದಲ, ತಂಟೆ ತಕರಾರುಗಳ ಮಧ್ಯೆಯೂ ಅವರ ಮೌನವಲಯ ಒಂದಿನಿತೂ ಘಾಸಿಗೊಳ್ಳಲಿಲ್ಲ. ಇದಕ್ಕೆ ಅವರ ಜೀವನದಲ್ಲಿ ಸಿಗುವಷ್ಟು ಉದಾಹರಣೆಗಳು ಯಾವ ಸಂತನ ಜೀವನದಲ್ಲೂ ಕಾಣಲು ಸಾಧ್ಯವಿಲ್ಲವೇನೋ. ಅಂದು ನಳಿನಿಯನ್ನು ಕರೆದುಕೊಂಡು ಹೋಗಲು ಅವಳ ಪತಿ ಎತ್ತಿನ ಗಾಡಿ ಮಾಡಿಕೊಂಡು ಜಯರಾಮಬಾಟಿಗೆ ಬಂದಿದ್ದಾನೆ. ನಳಿನಿ ತಾನು ಹೋಗುವುದಿಲ್ಲವೆಂದು ರಾದ್ಧಾಂತ ಮಾಡುತ್ತಿದ್ದಾಳೆ. ಎಲ್ಲರೂ ಅವಳಿಗೆ ಪತಿಯ ಮನೆಗೆ ಹೋಗುವಂತೆ ತಿಳಿಯಹೇಳುತ್ತಿದ್ದಾರೆ. ಆದರೆ ಅವಳು ಹೋಗಲು ಸಿದ್ಧಳಿಲ್ಲ. ಅವಳು ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸುತ್ತ ಕೋಣೆಯೊಳಗೆ ಹೋಗಿ ಅಗುಳಿ ಹಾಕಿಕೊಂಡಳು. ಅಷ್ಟರಲ್ಲಿ ರಾತ್ರಿಯಾಯಿತು. ಎಲ್ಲರೂ ಅವಳ ಕಿರಿಕಿರಿಯಿಂದ ರೋಸಿ ಹೋಗಿ ವಿಶ್ರಾಂತಿಗೆ ತೆರಳಿದರು. ಆದರೆ ಶ್ರೀಮಾತೆಯವರು ಮಾತ್ರ ಅವಳ ಕೋಣೆಯ ಹೊರಗಡೆಯೇ ಕುಳಿತು, ರಾತ್ರಿಯಿಡೀ ಅವಳನ್ನು ವಾತ್ಸಲ್ಯದಿಂದ ಕರೆಯುತ್ತ, ಸಾಂತ್ವನದ ನುಡಿಗಳನ್ನಾಡುತ್ತಲೇ ಇದ್ದರು. ಆದರೂ

೨ Reminiscences of Sri Sarada Devi, p.114.

೩ ಅಲ್ಲೇ, ಪು. ೧೧೫.

೪ ಅಲ್ಲೇ, ಪು. ೩೦.



ನಳಿನಿ ಕೋಣೆಯಿಂದ ಹೊರಬರಲೇ ಇಲ್ಲ, ಬೆಳಗಾಗಿಯೇ ಬಿಟ್ಟಿತು. ಶ್ರೀಮಾತೆಯವರು ಏನೂ ನಡೆದಿಲ್ಲವೆಂಬಂತೆ, ಯಾವ ಉದ್ವಿಗ್ನತೆ, ಅಸಮಾಧಾನ, ಸಿಡಿಮಿಡಿಯಿಲ್ಲದೆ, ಎಂದಿನಂತೆ 'ಗಂಗಾ ಗೀತಾ ಗಾಯತ್ರಿ , ಭಕ್ತ-ಭಾಗವತ-ಭಗವಾನ್' ಎಂದು ಉಚ್ಚರಿಸುತ್ತ ತಮ್ಮ ಎಂದಿನ ದಿನಚರಿಯನ್ನು ಪ್ರವೇಶಿಸಿದರು. ಇಡೀ ದಿನದಲ್ಲಿ ಅವರು ಎಲ್ಲೂ ನಳಿನಿಯ ಕಾರಣದಿಂದ ತಮಗಾದ ಅನನುಕೂಲಕ್ಕಾಗಿ ಅಸಹನೆಯನ್ನು ವ್ಯಕ್ತಪಡಿಸಲೇ ಇಲ್ಲ. ಇಂತಹ ಯಾವ ಘಟನೆಗಳಿಂದಲೂ ಅವರ ಸ್ತಿಮಿತತೆ ಕದಲಲಿಲ್ಲ.

ಶ್ರೀಮಾತೆಯವರಿಗೆ ಮಲೇರಿಯಾದಿಂದ ಪಿತ್ತಕೋಶ ಬಾತುಕೊಂಡಿತ್ತು. ಆ ದಿನಗಳಲ್ಲಿ ಇದಕ್ಕೆ ಇದ್ದಂತಹ ಚಿಕಿತ್ಸೆಯೆಂದರೆ ಜಯರಾಮಬಾಟಿಯಿಂದ ನಾಲ್ಕು ಮೈಲು ದೂರದಲ್ಲಿರುವ ಬದನಗಂಜಿನ ಶಿವದೇವಾಲಯಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಸ್ನಾನ ಮಾಡಿ ಬಂದ ರೋಗಿಯನ್ನು ಮಲಗಿಸಿ ನಾಲ್ಕು ಜನ ಅವನನ್ನು ಹಿಡಿದುಕೊಳ್ಳುತ್ತಿದ್ದರು. ಇನ್ನೊಬ್ಬ ವ್ಯಕ್ತಿ ಹೊಟ್ಟೆಯ ಮೇಲೆ ಬಾಳೆ ಎಲೆಯನ್ನಿಟ್ಟು ಚೆನ್ನಾಗಿ ಕಾದ ಬೋರೆ ಮರದ ಕೊಂಬೆಯಿಂದ ಆ ಭಾಗವನ್ನು ಚೆನ್ನಾಗಿ ಉಜ್ಜುತ್ತಿದ್ದನು. ಆಗ ಚರ್ಮ ಕಿತ್ತು ಬರುವಂತಾಗಿ ರೋಗಿ ಚೀತ್ಕಾರ ಮಾಡುತ್ತಿದ್ದನು. ಇಂತಹ ದೃಶ್ಯವನ್ನು ಸ್ವಯಂ ಶ್ರೀಮಾತೆಯವರೇ ಹಲವು ಸಲ ನೋಡಿದ್ದರು. ಇಂದು ಶ್ರೀಮಾತೆಯವರೇ ಆ ಚಿಕಿತ್ಸೆ ಮಾಡಿಸಿಕೊಳ್ಳಬೇಕಾಗಿದೆ. ಆದರೆ ಶ್ರೀಮಾತೆಯವರು ಯಾರೂ ತಮ್ಮನ್ನು ಹಿಡಿದುಕೊಳ್ಳುವುದು ಬೇಡವೆಂದರು. ಚಿಕಿತ್ಸೆಗೊಳಗಾದಾಗ ಅವರು ಅಳಲೂ ಇಲ್ಲ, ಕಿರುಚಾಡಲೂ ಇಲ್ಲ. ನಾವು ಆ ದೃಶ್ಯವನ್ನು ನೆನೆಪಿಸಿಕೊಂಡರೆ ನಮ್ಮ ಎದೆ ತಲ್ಲಣಿಸುತ್ತದೆ. ಇನ್ನು ಪರಮ ಕೋಮಲರಾದ ಶ್ರೀಮಾತೆಯವರು ಯಾವ ಮಟ್ಟದ ಮನೋದಾರ್ಢ್ಯದಿಂದ ಅದನ್ನು ಮೌನವಾಗಿ ಸಹಿಸಿಕೊಂಡಿರಬೇಕು! ಹೀಗೆ ಸಂಕಟಗಳ ವನವಸನವನುಟ್ಟು ನಿಂತ ಶಿಖರವೇ ಆದರೂ ಅವರ ಮೌನದ ಕೊಡ ತುಳುಕಾಡಲಿಲ್ಲ, ಶಾಂತಿ ಕದಲಲಿಲ್ಲ.

ಶ್ರೀಮಾತೆಯವರ ಎಲ್ಲ ಲೋಕಸಂಗ್ರಹ ಕಾರ್ಯಗಳು ಹೊರಹೊಮ್ಮಿದುದು ಮೌನದ ನೆಲೆಯಿಂದ, ಮೌನವಾಗಿ. ತಾವು ಶ್ರೀರಾಮಕೃಷ್ಣರ ಜೀವನಲೀಲೆಯಲ್ಲಿ ಮಹತ್ವಪೂರ್ಣ ಪಾತ್ರವನ್ನು ವಹಿಸಿದರೂ ಅವರದನ್ನು ಅತ್ಯಂತ ಗುಪ್ತವಾಗಿ, ಮೌನವಾಗಿ ನಿಭಾಯಿಸಿದರು. ಬಳಿಸಾರಿದ ಸಹಸ್ರ ಸಹಸ್ರ ಭಕ್ತರಿಗೆ ವರ ಅಭಯವನ್ನು ನೀಡಿದುದು, ಸಾಧಕರಿಗೆ ಮಾರ್ಗದರ್ಶನವನ್ನು, ನೊಂದ ಜೀವರಿಗೆ ಧೈರ್ಯ ಸಾಂತ್ವನ ಭರವಸೆ ನೀಡಿದುದು ಮೌನವಾಗಿ. ಕಾಮಾರಪುಕುರದ ಶ್ರೀರಾಮಕೃಷ್ಣರ ಮನೆಯನ್ನು ಶ್ರೀರಾಮಕೃಷ್ಣ ಮಠಕ್ಕೆ ಬರೆದುಕೊಡುವ ಜಟಿಲ ಕ್ಲಿಷ್ಟಕಾರ್ಯ, ಮಠ ಸೇರಿದ ಬಿಸಿ ನೆತ್ತರಿನ ಯುವ ಸಂನ್ಯಾಸಿಗಳಿಗೆ, ಸಂಘಟಿತರಾಗಿದ್ದು ವಿಧೇಯರಾಗಿದ್ದು ತ್ಯಾಗ-ಸೇವೆ ಮಾಡುವ ಮರ್ಮವನ್ನು ಕಲಿಸಿಕೊಟ್ಟುದು, ಶ್ರೀರಾಮಕೃಷ್ಣ ಕುಟುಂಬವನ್ನು ವಿಸ್ತಾರಗೊಳಿಸಿ ಸಬಲಗೊಳಿಸಿದುದು, ನಡುನಡುವೆ ನುಸುಳಿ ಬಂದ ಕೊಳೆ-ಕಸಗಳನ್ನು ಕಿತ್ತೆಸೆದದು ಎಲ್ಲವೂ ಮೌನವಾಗಿ. ಶ್ರೀ ರಾಮಕೃಷ್ಣರು ಹೇಳಿದಂತೆ, ''ಅವಳು ನನ್ನ ಶಕ್ತಿ. ಅವಳ ನೆರವಿನಿಂದ ನಾನು ಮಾನವತೆಗೆ ಮೋಕ್ಷಪ್ರದಾನ ಮಾಡುತ್ತೇನೆ.'' ಆ ಮೋಕ್ಷಪ್ರದಾನಕಾರ್ಯವನ್ನು ಶ್ರೀಮಾತೆಯವರು ಮೌನವಾಗಿ ಮಾಡಿದರು. ಅವರ ಮನಸ್ಸು ೨೪ ಘಂಟೆ ಮೌನವಲಯದಲ್ಲಿತ್ತು. ಇದನ್ನು ಯೋಗದ ಭಾಷೆಯಲ್ಲಿ ಹೇಳುವುದಾದರೆ ''ಅವರ ಮನಸ್ಸು ವಿಶುದ್ಧ ಚಕ್ರದಿಂದ ಕೆಳಮಟ್ಟಕ್ಕೆ ಹೋಗಲೇ ಇಲ್ಲ''ॐ ಆದ್ದರಿಂದ ಮರ್ತ್ಯದಲ್ಲೂ ಅವರು ಅಮರ್ತ್ಯದ ಶಾಂತಿ -ಸುಭಿಕ್ಷವನ್ನು ಪಸರಿಸಿದರು.

ಮಾತು-ಮನಸ್ಸುಗಳ ರಾಜ್ಯದಲ್ಲೇ ಅತಿ ವ್ಯಸ್ತರಾಗಿರುವ ನಾವು, ನಮ್ಮೆಲ್ಲ ಪ್ರಗತಿ-ಹೋರಾಟ-ಉನ್ನತಿ-ಯಶಸ್ಸುಗಳನ್ನು ಮಾತು-ಮನಸ್ಸುಗಳ ರಾಜ್ಯಕ್ಕೆ ಸೀಮಿತಗೊಳಿಸಿದ ನಾವು, ಮೌನದ ಪರಿಭಾಷೆಯೇ ಆದ ಶ್ರೀಮಾತೆಯವರ ಮೌನಜೀವನ ಮೌನ ಸಂದೇಶಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತ ಆ ಮೌನವನ್ನು ನಮ್ಮ ಜೀವನದಲ್ಲೂ ಬಿಂಬಿಸಲು ಯತ್ನಿಸೋಣ. ಮುಂದೊಂದು ದಿನ ಅವರ ಕೃಪೆಯಿಂದಲೇ ಮಾತು-ಮನಗಳ ಮಿತಿಯನ್ನು ಮೀರಿದ ಮೌನಪ್ರಭಾವಲಯದಲ್ಲೂ ಲೀನರಾಗುವಂತಾಗಲಿ. ¤

---

ॐ Sri Sarada Devi and Her Divine Play, p. 19.